ಕೊನೆಗೂ ಪ್ರಾದೇಶಿಕವಾಗಿಯೇ ಉಳಿಯತಕ್ಕದ್ದಲ್ಲದೆ ಅಖಂಡ ಕರ್ನಾಟಕಕ್ಕೆ ಸಲ್ಲುವಂಥದ್ದಲ್ಲ. ಕನ್ನಡದ ಎಲ್ಲ ಜನರಿಗೂ ಸಲ್ಲುವ ಆ ಹೊಸಭಾಷೆಯನ್ನು ಸೃಷ್ಟಿಸುವ ಕೆಲಸವನ್ನು ಕೂಡಾ ಬೇಂದ್ರೆಯವರು ಅತ್ಯುತ್ತಮ ಕವನಗಳನ್ನು ಅವ್ಯಾಹತವಾಗಿ ಮಾಡಿದ್ದಾರೆ. ಆ ಹೊಸಗನ್ನಡ ಭಾಷೆಯಲ್ಲೂ ಕೂಡಾ ಬೇಂದ್ರೆಯವರು ಅತ್ಯುತ್ತಮ ಕವನಗಳನ್ನು ಪ್ರಾದೇಶಿಕ ಭಾಷೆಯಲ್ಲಿ ಬರೆದ ಕವನಗಳಿಗೂ ಒಂದು ತೂಕ ಉತ್ತಮವಾದ ಕವನಗಳನ್ನು ಬರೆದಿದ್ದಾರೆ ಎಂಬುದನ್ನು ಗಮನಿಸಬೇಕು. ತಮ್ಮ ಮೊತ್ತಮೊದಲ ಕವನಸಂಕಲನ 'ಗರಿ'ಯಲ್ಲೂ ಬೇಂದ್ರೆಯವರು ಈ ಎರಡು ದಾರಿಗಳಲ್ಲಿ ನಡೆದು, ಎರಡರಲ್ಲೂ ಗುರಿ ಮುಟ್ಟುವುದನ್ನು ನಾವು ಕಾಣಬಹುದು. 'ಬೆಳಗು', 'ಹೂ', 'ಗರಿ', 'ಚತುರ್ಮುಖ ಸೌಂದರ್ಯ', 'ಹಕ್ಕಿ ಹಾರುತಿದೆ ನೋಡಿದಿರಾ?', 'ಕೀರ್ತಿ', 'ನರಬಲಿ', 'ಕನಸಿನೊಳಗೊಂದು ಕಣಸು' ಮುಂತಾದ ಕವನಗಳಲ್ಲಿ ಈ ಹೊಸಗನ್ನಡ ಭಾಷೆಯ ಮಧುರಪಾಕ ಸಿದ್ಧವಾಗಿತ್ತು. ಆಮೇಲೆ ರಚಿತವಾದ 'ನಾದಲೀಲೆ', 'ದೀಪ', 'ಎಲ್ಲಿರುವೆ ರಾಜ ಗಂಭೀರ', 'ಪಾರಿಜಾತ', 'ಉದಿತ ದಿನ', 'ಬಾಳಗರುಡಿ', 'ಹೆಣದ ಹಿಂದೆ', 'ಸಖೀಗೀತ', 'ಬೈರಾಗಿಯ ಹಾಡು', 'ಮೂರ್ತಿ', 'ಉಯ್ಯಾಲೆ'ಯ ಅಷ್ಟಪದಿಗಳು, 'ತರಂಗ'ದ ಸೀಸಪದ್ಯಗಳು ಅವುಗಳಲ್ಲೆಲ್ಲ ಈ ಹೊಸಗನ್ನಡ ಭಾಷೆ ಸಮಸ್ತ ಕರ್ಣಾಟಕದ ಸುಸಂಸ್ಕೃತವಾದ, ನಯವಾದ, ತಿದ್ದಿತೀಡಿದ ಸುದೃಢ ಸುಂದರ ಭಾಷೆಯಾಗಿ ಮಾರ್ಪಟ್ಟುದನ್ನು ಕಾಣುತ್ತೇವೆ. ಇವುಗಳಲ್ಲೆಲ್ಲ ಪುನರುತ್ಥಾನಗೊಂಡ ಹೊಸಗನ್ನಡದ ನೂತನ ಮಾಧುರ್ಯ, ಬಿಗಿ, ಗಾಂಭೀರ್ಯಗಳನ್ನೂ, ಯುಗವಾಣಿಯಾಗಿ ಅದು ಮಾರ್ಪಟ್ಟ ರೀತಿಯನ್ನೂ ಗುರುತಿಸಬಹುದು.

ಕಾಲಕ್ಕೆ ಸರಿಯಾಗಿ ಭಾಷೆಯನ್ನು ಹೊಂದಿಸಿ ಕೊಳ್ಳುವ ಈ ಕೆಲಸ, ಆಡುನುಡಿಯಿಂದಲೇ ಬರೆಯುವ ನುಡಿ ರೂಪುಗೊಳ್ಳುವ ಈ ವಿದ್ಯಮಾನ ಯಾವ ಸಾಹಿತ್ಯಕ್ಕೂ ಹೊಸದಲ್ಲ. ಸಾಹಿತ್ಯ ಯುಗ ಯುಗಕ್ಕೆ ಮಾರ್ಪಟ್ಟು ಯುಗವಾಣಿಯಾಗುವ ಮಾರ್ಗವೇ ಇದು. ಕನ್ನಡ ಸಾಹಿತ್ಯದಲ್ಲೂ ಕೂಡ ಈ ಕೆಲಸ ನಡೆಯುತ್ತ ಬಂದಿರುವುದನ್ನು ನಾವು ಗಮನಿಸ ಬಹುದು. ಪಂಪ, ರನ್ನರ ಭಾಷೆಯಿಂದ ನಯಸೇನನ ಭಾಷೆಗೆ, ಅಲ್ಲಿಂದ ಕುಮಾರವ್ಯಾಸ ರತ್ನಾಕರರ ಯುಗದ ಭಾಷೆಗೆ, ಶರಣರ ಅಚ್ಚಗನ್ನಡದ ತಿರುಳು ನುಡಿಗೆ, ಅಲ್ಲಿಂದ ಈ ಯುಗದ ಹೊಸಗನ್ನಡಕ್ಕೆ, ಹೀಗೆ ಸಾಹಿತ್ಯಭಾಷೆ ರೂಪಾಂತರಗೊಳ್ಳುತ್ತಿರುವುದು ಪ್ರಕೃತಿ ನಿಯಮ. ಹೊಸಗನ್ನಡದ ನವೋದಯ ಕಾಲದಲ್ಲಿ ಅನೇಕ ಶತಮಾನಗಳಿಂದ ತನ್ನ ಸೃಷ್ಟಿಶಕ್ತಿಯನ್ನು ಕಳೆದು ಕೊಂಡಿದ್ದ ಜನರ ಭಾಷೆ ಸತ್ವವಿಲ್ಲದ, ಸೊಬಗಿಲ್ಲದ ಬರಡುನುಡಿಯಾಗಿತ್ತು. ನೂತನ ಜಗತ್ತಿನ ವಿದ್ಯಮಾನಗಳನ್ನು ನವೀನ ಮನೋವ್ಯಾಪಾರ ಗಳನ್ನೂ ಚಿತ್ರಿಸಲು ತೀರಾ ಅಸಮರ್ಥವಾಗಿತ್ತು.

ಹೊಸಕಾವ್ಯದ ಇದಿರು ಭೂತದಂತೆ ಬಂದು ನಿಂತ ಸಮಸ್ಯೆಯೇ ಇದು, ಈ ಬರಡು ಭಾಷೆ ವಿವಿಧಾನುಭವಗಳ ವಾಹನವಾಗುವಂತೆ ಮಾಡುವ ಬಗೆ ಹೇಗೆ? ಈ ನಿಃಸತ್ವ ಭಾಷೆಗೆ ಪಂಪ, ರನ್ನ ಕುಮಾರವ್ಯಾಸರ ರಸವಾಣಿಯಲ್ಲಿ ಕಂಡು ಬರುವ ಗಾಂಭೀರ್ಯ, ಲಯ, ಗತ್ತು, ನಾದಸಂಪತ್ತು, ಬಿಗಿ, ನವುರು ಬರುವಂತೆ ಅದಕ್ಕೆ ಜೀವಶಕ್ತಿಯನ್ನು ತುಂಬುವ ಕೆಲಸ ಆಗ ಅತ್ಯಗತ್ಯವಾಯಿತು. ಹೊಸಕಾವ್ಯ ಸಂಪ್ರದಾಯ ಬೆಳೆದು ಸಂಸ್ಕೃತಿ, ಜನ ಜೀವನದಲ್ಲಿ ಹಾಸುಹೊಕ್ಕಾಗಿರುವಾಗ ಭಾಷೆಯ ಪ್ರಶ್ನೆಗೆ ಅಷ್ಟು ಮಹತ್ವ ಬರುವುದಿಲ್ಲ. ಪಳಗಿ ಸಿದ್ಧವಾದ ಭಾಷೆಯಲ್ಲಿ ಸಾಹಿತ್ಯ ಕಾರ್ಯ ಆಗ ಸುಗಮವಾಗಿ ನಡೆಯುತ್ತದೆ. ಆದರೆ ಹೊಸ ಹುಟ್ಟಿನ ಕಾಲದಲ್ಲಿ ಭಾಷಾ ಸಮಸ್ಯೆಯೂ ಸೃಷ್ಟಿ ಸಮಸ್ಯೆಯೂ ಅಭಿನ್ನವೇ ಆಗುತ್ತದೆ. ಈ ಸಮಸ್ಯೆಯ ಅರಿವು ಅದನ್ನು ಬಿಡಿಸುವ ಪ್ರಯತ್ನ ಹೊಸಕನ್ನಡದ ಉತ್ತಮ ಕವಿಗಳ ಕೃತಿಗಳಲ್ಲೆಲ್ಲ ಹೆಚ್ಚು ಕಡಿಮೆ ಕಂಡು ಬರುತ್ತದೆ. ಈ ಸಮಸ್ಯೆಗೆ ಮುಖಕೊಟ್ಟು ಎದುರಿಸಿ ಗೆದ್ದ ಬಿರುದು ಬೇಂದ್ರೆಯವರಿಗೆ ಮಾತ್ರ ಸಲ್ಲುತ್ತದೆ.

●

**ಸೌಜನ್ಯ: ಕನ್ನಡ ಸಂಘ, ಕ್ರೈಸ್ಟ್ ಕಾಲೇಜು ಪ್ರಕಟಣೆ (1991) – 'ಬೇಂದ್ರೆಯವರ ಕಾವ್ಯ' ಕೃತಿಯಲ್ಲಿನ 'ಬೇಂದ್ರೆಯವರ 'ಉಯ್ಯಾಲೆ' ಬರಹದ ಆಯ್ದ ಭಾಗ.**